**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬ್ಲೂಃ33 ಪಿ ಡಬ್ಲ್ಯೂಃ32**

**ಹೆಸರುಃ** **ಶಿವಾನಂದ**

**ತಂದೆ ಹೆಸರುಃ ಯಲ್ಲಪ್ಪ ಕುಸಮ್ಮನವರ**

**ವಯಸ್ಸುಃ** **56 ವರ್ಷಗಳು.**

**ಉದ್ಯೋಗಃ** **ವ್ಯವಸಾಯ**

**ವಾಸ ಸ್ಥಳಃ** **ಇಂಗಳಗಿ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನವನ್ನು ದಿಃ09.01.2026 ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ1, 4, 5, 7 ರಿಂದ 19, 20 ರಿಂದ 30, 31, 32, 34 ಹಾಗೂ 35 ಪರಿಚಯ ಇರುವುದಿಲ್ಲ. ಚಾಸಾಃ 2, 3, 6 ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ಹಾಜರು ಇದ್ದು, 4 ಮತ್ತು 5 ರವರು ಆರೋಪಿ ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿಯ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದ್ದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು

ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ಗೊತಿರುತ್ತದೆ. ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಕೆಲಸಕ್ಕೆ ಹೋಗಿರುತ್ತೇವೆ. ಹಾಜರಾತಿ ಪಟ್ಟಿ ನಂಃ61477 ಅದರ ಅ.ನಂಃ60 ನನ್ನ ಹೆಸರು ಬರೆಯಲಾಗಿದೆ. ಜಾಬ್ ಕಾರ್ಡ ನಂಃ305, ನಮೂದು ರೂ 700/- ರಂತೆ ಒಟ್ಟು 1400/- ಕಾೂಲಿ ಹಣವನ್ನು ಬರೆಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮಿಬ್ಬರ ಹೆಸರುಗಳು ಮುಂದೆ ಹೆಬ್ಬಟ್ಟಿನ ಸಹಿ ಮಾಡಿದ್ದು, ಅವು ಖೊಟ್ಟಿ ಸಹಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಉಳಿತಾಯ ಖಾತೆಗೆ ರೂ 1400/- ಜಮಾ ಆಗುವ ಬದಲಿಗೆ ರೂ 8,800/- ದಿಃ11.03.2010 ರಂದು ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ಈಬಗ್ಗೆ ಕಾರ್ಯದರ್ಶಿ ಆ ಹಣವನ್ನು ಬೇರೆ ಕೂಲಿಕಾರರಿಗೆ ನೀಡಬೇಕಾದ ಹಣ ಅಂತ ತಿಳಿಸಿ ಇಬ್ಬರು ಕೂಲಿ ಬಾಬ್ತು ರೂ 1400/- ನ್ನು ಮುರಿದುಕೊಂಡು ಉಳಿದ ಹಣ ನನ್ನಿಂದ ಪಡೆದುಕೊಂಡರು ಎಂದರೆ ಸರಿಯಲ್ಲ.

ದಿಃ13.03.2010 ರಂದು ಬ್ಯಾಂಕಿಗೆ ಹೋಗಿ ರೂ 10,000/- ನನ್ನ ಉಳಿತಾಯ ಖಾತೆಯಿಂದ ತೆಗೆಸಿ ಅದರಲ್ಲಿ ನಮ್ಮ ಕೂಲಿ ಹಣ 1400/-ಕಡಿತಗೊಂಡಿಸಿಕೊಂಡು ರೂ 7400/- ಕಾರ್ಯದರ್ಶಿ ನದಾಫ ಇವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ತಮ್ಮ ಕಡೆಗೆ ಇದ್ದ ಬ್ಯಾಂಕಿನಿಂದ ಪಡೆದ ಚೆಕ್ಕ ನಂಃ172560 ನ್ನು ನೋಡಲಾಗಿ ಅದು ರೂ. 70,658/- ಒಟ್ಟು 8 ಜನರ ಹೆಸರಿಗೆ ಜಮಾ ಮಾಡಲು ಚೆಕ್ಕ ಸಂಗಡ ಒಂದು ಲಿಸ್ಟ ಕಳುಹಿಸಿದ್ದು ಅ.ನಂಃ6 ಕ್ಕೆ ನನ್ನ ಹೆಸರು ನಮೂದಿಸಿ ಉಳಿತಾಯ ಖಾತೆ ಬರೆದು ರೂ 8800/- ಜಮಾ ಮಾಡಲು ಬರೆಲಾಯಿತು ಎಂದರೆ ಸರಿಯಲ್ಲ. ನಾನುಕಾರ್ಯದರ್ಶಿ ಇವರಿಗೆ ನೀಡಿದ ಹಣ ಅವರು ಯಾರಿಗೆ ಕೊಟ್ಟರು ಅಂತ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ರೀತಿ ಒಟ್ಟು ಹಣವನ್ನು ಖಾತೆಗೆ ಜಮಾ ಆದ ಹಣವನ್ನು ಗ್ರಾಮ ಪಂಚಾಯತ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಸದಸ್ಯರು ಮೀಲಾಪೆಯಾಗಿ ಕೂಲಿಕಾರ ಹಣವನ್ನು ತಮ್ಮ ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸರಕಾರಕ್ಕೆ ಮತ್ತು ಕೂಲಿಕಾರ್ಮಿಕರಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ39 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬ್ಲೂಃ36 ಪಿ ಡಬ್ಲ್ಯೂಃ33**

**ಹೆಸರುಃ ಶಂಕರಗೌಡ**

**ತಂದೆ ಹೆಸರುಃ ಶಿವನಗೌಡ ಹಿರೇಗೌಡರ್**

**ವಯಸ್ಸುಃ 66 ವರ್ಷಗಳು.**

**ಉದ್ಯೋಗಃ ನಿವೃತ್ತ ಪಿಡಿಓ, ಇಂಗಳಗಿ ಗ್ರಾಮ ಪಂಚಾತ (ಹಾಲಿ ವ್ಯವಸಾಯ)**

**ವಾಸ ಸ್ಥಳಃ ಸಂಕ್ಲೀಪುರ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನವನ್ನು ದಿಃ09.01.2026 ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ2, 4, 5, 7, 10 ರಿಂದ 34 ಹಾಗೂ 35 ಪರಿಚಯ ಇರುವುದಿಲ್ಲ. ಚಾಸಾಃ1, 6, 8, 9 ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ಹಾಜರು ಇದ್ದು, 4 ಮತ್ತು 5 ರವರು ಆರೋಪಿ ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿಯ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಆರೋಪಿತರ ಪೈಕಿ 3 ನೇ ಆರೋಪಿ ಮಾತ್ರ ಪರಿಚಯ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ನಾನು ಹಿಂದಿನ ಪಿಡಿಓ ಶೆಟ್ಟನವರ ಇವರಿಂದ ದಿಃ26.09.2010 ಪ್ರಭಾರ ಪಿಡಿಓ ಅಂತ ಚಾರ್ಜ ತೆಗೆದುಕೊಂಡು ದಿಃ02.07.2014 ರಂದು ಹೊಸದಾಗಿ ಬಂದ ದರ್ಮಣ್ಣ ಎ.ಕೆ ಇವರಿಗೆ ಪಿಡಿಓ ಚಾರ್ಜ ನೀಡಿರುತ್ತೇನೆ ಎಂದರೆ ಸರಿ. ಸಧ್ಯ ನಮ್ಮ ಗ್ರಾಮ ಪಚಾಯತಿನಲ್ಲಿ ಅಂತ ಪಿಡಿಓ ದರ್ಮಣ್ಣ ಎಕೆ ಹಾಗೂ ಕ್ಲರ್ಕ 3 ನೆ ಆರೋಪಿ, ಬಿ ಎಮ್ ಮಲಿಗವಾಡ ಅನ್ನುವರು

ಕೆಲಸ ಮಾಡುತಿದ್ದರು ಎಂದರೆ ಸರಿ. ನಮ್ಮ ಗ್ರಾಮ ಪಂಚಾಯತಿನಲ್ಲಿ ಅಧ್ಯಕ್ಷರು ಅಂತ ಬಿ ಎಮ್ ಕಂಠೇಪ್ಪಗೌಡರ ಉಪಧ್ಯಾಕ್ಷರು ಅಂತ ಜಿ ಬಿ ಬಾರಕೇರ ಇದ್ದರು ಎಂದರೆ ಸರಿ. ನಮ್ಮ ಗ್ರಾಮ ಪಚಾಯತಿನಲ್ಲಿ ಹಿರೇಬೂದಿಹಾಳ ಗ್ರಾಮ ಸಮಾವೇಶಗೊಂಡಿದೆ ಎಂದರೆ ಸರಿ. ಅದರಲ್ಲಿ ಒಟ್ಟು 15 ಜನ ಸದಸ್ಯರು ಎಂದರೆ ಸರಿ. ಜೂನ್ 2010 ರಿಂದ ಹೊಸದಾಗಿ ಆಯ್ಕೆಯಾದ ಪಂಚಾಯತ ಕಮಿಟಿಯವರು ಆಡಳಿತ ನಡೆಸುತಿದ್ದರು ಎಂದರೆ ಸರಿ.

ಇಂಗಳಗಿ ಗ್ರಾಮ ಪಂಚಾಯತನಲ್ಲಿ 2009-10 ಹಾಗೂ 2010-11 ರಲ್ಲಿ ಮರೇಗಾ ಯೋಜನೆಯಲ್ಲಿ ಹಿಂದಿನ ಪಿಡಿಓ ಹಾಗೂ ಹಿಂದಿನ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಹಣಕಾಸಿನ ವ್ಯವಹಾರದಲ್ಲಿ ಅವ್ಯವಹಾರ ಮಾಡಿರುತ್ತಾರೆ ಅಂತ ಚಾಸಾಃ1 ರವರು ಪ್ರಕರಣದ ದಾಖಲಿಸಿದ ವಿಷಯ ನನಗೆ ಗೊತ್ತು. ಹಿರೇಬೂದಿಹಾಳ ಗ್ರಾಮದ ಮಲ್ಲೇಶಪ್ಪ ದೇವಪ್ಪ ಸೋಮಣ್ಣನವರ, ನೇಮನಗೌಡ ಸಿದ್ದನಗೌಡ ಕಂಠೆಪ್ಪಗೌಡರ ಇಬಬರಿಗೂ ಮೇಟ್ಸ ಅಂತ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ. ಜಾಗೃತ ದಳದವರು ಪರಿಶೀಲನೆಗೆ ಬಂದಾಗ ನಾನು ಕೆಲವೊಂದು ದಾಖಲೆಗಳನ್ನು ಅವರಿಗೆ ಒದಗಿಸಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ ಆರೋಪಿತರ ಪರ ವಕೀಲರುಃ</u>**

1. ನಾನು ಇಂಗಳಗಿ ಪಿಡಿಓ ಆಗಿ ಕರ್ತವ್ಯನಿರ್ವಹಿಸಿರುವ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿ ಇವರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಇಂಗಳಗಿ ಪಿಡಿಓ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**<u>(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)</u>**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**